ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

NAAC Accredited with "A" Grade 2022
ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-28/2022-23/ A-77 ದಿನಾಂಕ: 19 DEC 2022

"ಗೌಪ್ಯ"

ಕರ್ನಾಟಕ ವಿಶ್ವವಿದ್ಯಾಲಯದ ಸಾಧಾರಣ ಸಿಂಡಿಕೇಟ್ ಸಭೆಯನ್ನು ದಿನಾಂಕ 5 ಡಿಸೆಂಬರ, 2022 ರಂದು ಮುಂಜಾನೆ 11:30 ಗಂಟೆಗೆ ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:

1.	ಪ್ರೋ. ಕೆ. ಬಿ. ಗುಡಸಿ, ಕುಲಪತಿಗಳು, ಕ.ವಿ.ವಿ. ಧಾರವಾಡ	ಅಧ್ಯಕ್ಷರು
2.	ಶ್ರೀ. ಕೃಷ್ಣಮೂರ್ತಿ ಬಿ.ಆರ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ,	ಸದಸ್ಯರು
3.	ಡಾ. ಆರ್. ಆರ್. ಮದನಕರ, ಡೀನರು	ಸದಸ್ಯರು
4.	ಶ್ರೀಮತಿ. ಹಂಸವೇಣಿ ಎನ್., ಧಾರವಾಡ	ಸದಸ್ಯರು
5.	ಡಾ. ಕೆ. ಡಿ. ಹಾವೇರಿಪೇಟ್, ಸಲಕಿನಕೊಪ್ಪ, ಧಾರವಾಡ	ಸದಸ್ಯರು
6.	ಡಾ(ಶ್ರೀಮತಿ). ಕಮಲಾ ಡಿ. ಧವಳೆ, ಪ್ರಾಚಾರ್ಯರು, ಧಾರವಾಡ	ಸದಸ್ಯರು
7.	ಶ್ರೀ. ಆರ್.ಬಿ. ಗೋಡಿ, ಪ್ರಾಚಾರ್ಯರು, ಕುಂದಗೋಳ	ಸದಸ್ಯರು
8.	ಪ್ರೋ. ಎಮ್.ಕೆ. ಶೇಖ್, ಪ್ರಾಚಾರ್ಯರು, ಭಟ್ಕಳ	ಸದಸ್ಯರು
9.	ಡಾ(ಶ್ರೀಮತಿ). ವಿಜಯಲಕ್ಷ್ಮೀ ಎಮ್. ನಾಯ್ಕ, ಪ್ರಾಚಾರ್ಯರು, ಹೊನ್ನಾವರ	ಸದಸ್ಯರು
10.	ಶ್ರೀ. ಜಯಪ್ರಕಾಶ ಎಸ್. ಬದಾಮಿ, ನವಲಗುಂದ	ಸದಸ್ಯರು
11.	ಶ್ರೀಮತಿ. ಸ್ನೇಹಾ ಜೋಶಿ, ಬೆಂಗಳೂರು	ಸದಸ್ಯರು
12.	ಶ್ರೀ. ಸುಧೀಂದ್ರ ಎಂ. ದೇಶಪಾಂಡೆ, ಧಾರವಾಡ	ಸದಸ್ಯರು
13.	ಶ್ರೀ. ಸಂದೀಪ ಎಮ್. ಬೂದಿಹಾಳ, ಹುಬ್ಬಳ್ಳಿ	ಸದಸ್ಯರು
14.	ಡಾ. ಸಿ. ಕೃಷ್ಣಮೂರ್ತಿ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ.ಧಾರವಾಡ	ಸದಸ್ಯರು
15.	ಶ್ರೀ. ಯಶಪಾಲ ಕ್ಷೀರಸಾರ ಭಾ.ಆ.ಸೇ, ಕುಲಸಚಿವರು (ಆಡಳಿತ), ಕ.ವಿ.ವಿ.ಧಾರವಾಡ	ಸದಸ್ಯ ಕಾರ್ಯದರ್ಶಿಗಳು

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 15 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ಬೆಳಗ್ಗೆ 11:30 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ದಿನಾಂಕ 02.09.2022ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. ಅದಕ್ಕೆ ಸದಸ್ಯರೆಲ್ಲರು ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿದರು.

ದಿನಾಂಕ 23.09.2022ರ ಸಾಧಾರಣ ಸಿಂಡಿಕೇಟ ಸಭೆಯ ಕಲಂ ಸಂಖ್ಯೆ 15ರ ಬದಲಾಗಿ 16 ಎಂದು ನಮೂದಾಗಿದ್ದು (ವಿಷಯ: ಜಿಲ್ಲಾ ವ್ಯಾಪ್ತಿಯಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿಬರುವ ಸಾಂಸ್ಕೃತಿಕ ವಲಯಗಳ Sub Zonal Office of the South Central Zone at Dharwad, Karnataka State ಗೆ ಜಮೀನನ್ನು ನೀಡುವ ಬಗ್ಗೆ ಪರಿಶಿಲಿಸುವದು) ಇದನ್ನು ಕಲಂ ಸಂಖ್ಯೆ 15 ಎಂದು ಓದಿಕೊಳ್ಳುವುದು ಹಾಗೂ ಉಳಿದ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

ದಿನಾಂಕ 16.11.2022ರ ವಿಶೇಷ ಸಿಂಡಿಕೇಟ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

ಕುಲಸಚಿವರು 9/12/22

ಕುಲಪತಿಗಳು

ಕಲಂ ಸಂಖ್ಯೆ-02: ವಿಷಯ-: ದಿನಾಂಕ 01.08.2014 ಮತ್ತು 03.09.2014 ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯು ದೃಢೀಕರಿಸುವ ಕುರಿತು.

ಟಿಪ್ಪಣಿ:

1) ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ಸಂಖ್ಯೆ D.O.No GS 03 KUM 2014 ದಿನಾಂಕ 14.10.2014 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳಿಗೆ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ದೇಶಿಸಿದಂತೆ, ದಿನಾಂಕ 18.12.2014 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಸದರ ನಡಾವಳಿಗಳು ದೃಢೀಕರಣಗೊಂಡಿರುವುದಿಲ್ಲ. ಸದರ ಪತ್ರದಲ್ಲಿ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ನಡಾವಳಿಗಳು ಕೂಡ ಯಾವುದೇ ಕ್ರಮ ಜರುಗಿಸಬಾರದೆಂದು ನಿರ್ದೇಶನವಿರುತ್ತದೆ.

2) ದಿನಾಂಕ 01.08.2014 ರ ಸಿಂಡಿಕೇಟ ಸಭೆಯ ಠರಾವು ಸಂಖ್ಯೆ 28 ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ್ದು, ಸದರ ಠರಾವಿನನ್ವಯ ಕ್ರಮ ಜರುಗಿಸಲು ಅನುಮೋದನೆ ಕೋರಿ ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳಿಗೆ ದಿನಾಂಕ 28.02.2018 ಮತ್ತು 19.01.2021 ರ ಪತ್ರಗಳ ಮೂಲಕ ವಿನಂತಿಸಲಾಗಿತ್ತು.

3) ಗೌರಾವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ದಿನಾಂಕ 18.02.2021 ಮತ್ತು 25.05.2021 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ಒಟ್ಟು 47 ನಡಾವಳಿಗಳು ಹಾಗೂ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ಒಟ್ಟು 09 ನಡಾವಳಿಗಳು ಹಾಗೂ ಅಜೆಂಡಾ ಪ್ರತಿಗಳನ್ನು ಇಂಗ್ಲೀಷ ಭಾಷೆಯಲ್ಲಿ ಸಲ್ಲಿಸುವಂತೆ ನಿರ್ದೇಶಿಸಿದ ಪ್ರಯುಕ್ತ, ಸದರ ಸಭೆಗಳ ನಡಾವಳಿಗಳನ್ನು ಮತ್ತು ಅಜೆಂಡಾ ಪ್ರತಿಗಳನ್ನು ಪತ್ರ ದಿನಾಂಕ 07.06.2021 ರ ಮೂಲಕ ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳಿಗೆ ಸಲ್ಲಿಸಲಾಗಿತ್ತು.

4) ದಿನಾಂಕ 07.06.2021 ರ ಪತ್ರಕ್ಕನುಗುಣವಾಗಿ ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳ ಪತ್ರ ದಿನಾಂಕ 10.06.2021 ರಲ್ಲಿ ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ಹಾಗೂ ದಿನಾಂಕ 20.09.2014 ರ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಈ ಹಿಂದೆ ಆದೇಶಿಸಿದಂತೆ "ಯಾವುದೇ ಕ್ರಮ ಜರುಗಿಸಬಾರದೆಂಬ" ಆದೇಶವನ್ನು ಈ ಕೆಳಗೆ ನಮೂದಿಸಿದಂತೆ ಹಿಂಪಡೆಯಲಾಗಿರುತ್ತದೆ.

> **"With reference to the above mentioned subject, I am directed to inform that, the orders passed not to act on the resolutions passed in the Syndicate meetings held on 01.08.2014 and 03.09.2014 and the Finance Committee Meeting held on 20.09.2014 has been withdrawn by the Hon'ble Governor and Chancellor".**

5) ಆದ್ದರಿಂದ, ದಿನಾಂಕ 01.08.2014 ಮತ್ತು 03.09.2014 ರ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

ನಿರ್ಣಯ

ದಿನಾಂಕ 01.08.2014 ಮತ್ತು 03.09.2014 ರಂದು ಜರುಗಿದ ಸಿಂಡಿಕೇಟ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಸದಸ್ಯರೆಲ್ಲರು ಈ ಬಗ್ಗೆ ಚರ್ಚಿಸಲು ಹೆಚ್ಚಿನ ಸಮಯಾವಕಾಶ ಬೇಕಾಗಿರುವುದೆಂದು ತಿಳಿಸಿದಾಗ ಒಮ್ಮತದಿಂದ ಈ ವಿಷಯವನ್ನು ಮುಂಬರುವ ಸಿಂಡಿಕೇಟ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-03: ವಿಷಯ-: ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

ಟಿಪ್ಪಣಿ:

ಕರ್ನಾಟಕ ವಿಶ್ವವಿದ್ಯಾಲಯದ ಈ ಕೆಳಗೆ ನಮೂದಿಸಿದ ದಿನಾಂಕಗಳಂದು ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಅಧಿಕಾರದ ಅವಧಿಯು ಕೊನೆಗೊಂಡ ಪ್ರಯುಕ್ತ/ ನಿವೃತ್ತಿ ಹೊಂದಿದ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ರ ಅಡಿಯಲ್ಲಿ, ಜೇಷ್ಠತೆಯ ಅನುಸಾರ ಆಯಾ ವಿಭಾಗಗಳ ಹಿರಿಯ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿದ್ದರಿಂದ, ಸಿಬ್ಬಂದ್ಧಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪಡೆದ ವಿವಿಧ ಅಧ್ಯಯನ ವಿಭಾಗಗಳ ಪ್ರಸ್ತುತ ಶಿಕ್ಷಕರ ಜೇಷ್ಠತಾ ಯಾದಿಯ ಪ್ರಕಾರ ಈ ಕೆಳಗಿನ ಶಿಕ್ಷಕರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಹಾಗೂ ಸಹ-ಪ್ರಾಧ್ಯಾಪಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸುವ ಕುರಿತು ದಿನಾಂಕ 23.06.2016 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 12ರ ಹಾಗೂ ಅಧಿಸೂಚನೆ ಸಂಖ್ಯೆ: KU/Syndicate/Dept/Chair/2016-17/157 ದಿನಾಂಕ.01.06.2016ರ ಅಧಿಸೂಚನೆಯನ್ವಯ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ ಆಯಾ ವಿಭಾಗಗಳ ಶಿಕ್ಷಕರ ಜೇಷ್ಠತೆಯ ಅನುಸಾರವಾಗಿ ಹಿರಿಯ ಶಿಕ್ಷಕರನ್ನು ಮುಖ್ಯಸ್ಥರುಗಳನ್ನಾಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಅ.ನಂ.	ವಿಭಾಗ	ವಿಭಾಗದ ಮುಖ್ಯಸ್ಥರು (ಈ ಮೊದಲಿನ)	ಮುಖ್ಯಸ್ಥರ ಅವಧಿ ಕೊನೆಗೊಂಡ ದಿನಾಂಕ	ಪ್ರಸ್ತುತ ವಿಭಾಗದ ಮುಖ್ಯಸ್ಥರು	ನೇಮಕ ಮಾಡಿದ ದಿನಾಂಕ	ಅಧಿಸೂಚನೆ ಹೊರಡಿಸಿದ ದಿನಾಂಕ
1)	ಮನೋವಿಜ್ಞಾನ ವಿಭಾಗ	ಡಾ. ಶಿವಕುಮಾರ ಕೆ., ಪ್ರಾಧ್ಯಾಪಕರು	31.08-2022	ಡಾ.(ಶ್ರೀಮತಿ). ವಿ.ಎ. ಅಮ್ಮಿನಭಾವಿ, ಪ್ರಾಧ್ಯಾಪಕರು	01-09-2022	01-09-2022
2)	ಕಾನೂನು ವಿಭಾಗ	ಡಾ. ಐ. ಶರತಬಾಬು, ಪ್ರಾಧ್ಯಾಪಕರು	30-09-2022	ಡಾ.(ಶ್ರೀಮತಿ). ಮಂಜುಳಾ.ಎಸ್.ಆರ್., ಸಹ-ಪ್ರಾಧ್ಯಾಪಕರು	01-10-2022	26-09-2022

ಆದ್ದರಿಂದ, ಮೇಲ್ಕಾಣಿಸಿದಂತೆ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಸ್ನಾತಕೋತ್ತರ ವಿವಿಧ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-04: ವಿಷಯ-: Consideration of the proceedings of the meeting of the Library Advisory Board held on 08-07-2022.

NOTE:

The meeting of the Library Advisory Board was held on 08-07-2022 at Prof. S.S. Basavanal Library, Karnatak University, Dharwad.

The proceedings of the said meeting are placed before the Syndicate for its consideration.

ನಿರ್ಣಯ

Syndicate Considered and approved the proceedings of the Library Advisory Board held on 08-07-2022.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-05: ವಿಷಯ-: ಡಾ.ಎಚ್.ನಿರಂಜನಮೂರ್ತಿ, ಪ್ರಾಧ್ಯಾಪಕರು (ನಿವೃತ್ತಿ), ಇವರ "ಕ್ಯೂರೇಟರ್ ಆಫ್ ಮ್ಯೂಸಿಯಮ್" ಹುದ್ದೆಯಲ್ಲಿನ ಸೇವೆಯ ಸೇವಾ ದೃಢೀಕರಣಗೊಳಿಸುವ ವಿಷಯವಾಗಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಅನುಮೋದಿಸುವ ಕುರಿತು.

ಟಿಪ್ಪಣಿ:

ಡಾ.ಎಚ್.ನಿರಂಜನಮೂರ್ತಿ ರವರು ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇಲ್ಲಿ ಈ ಕೆಳಕಂಡ ಅಂಕಣ ಸಂಖ್ಯೆ.2 ರಲ್ಲಿನಂತೆ ಇರುವ ಬೋಧಕ ಹುದ್ದೆಗಳಿಗೆ ನೇಮಣೂಕಿಗೊಂಡು ಅಂಕಣ ಸಂಖ್ಯೆ.4 ರಲ್ಲಿ ಉಲ್ಲೇಖಿಸಿದ ದಿನಾಂಕಗಳಂದು ತಮ್ಮ ಕರ್ತವ್ಯಕ್ಕೆ ವರದಿಮಾಡಿಕೊಂಡಿದ್ದು, ಸದರಿ ವಿಭಾಗದಲ್ಲಿ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ಹೊಂದಿ "ಪ್ರಾಧ್ಯಾಪಕ" ಎಂದು ಕಾರ್ಯ ನಿರ್ವಹಿಸಿ ದಿನಾಂಕ.30.07.2022 (ದಿನಾಂಕ.31.07.2022 ರಂದು ಭಾನುವಾರ ರಜೆ ಇರುವ ಹಿನ್ನಲೆ) ರಂದು ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

ಅ.ಸಂ.	ಹುದ್ದೆ	ನೇಮಕಾತಿ ಆದೇಶ ಸಂಖ್ಯೆ/ದಿನಾಂಕ	ಸೇವೆಗೆ ವರದಿ ಮಾಡಿಕೊಂಡ ದಿನಾಂಕ
1	2	3	4
1	ಉಪನ್ಯಾಸಕ	5504/05.10.1988	05.10.1988
2	ಪ್ರವಾಚಕ	9340/09.03.1996	09.03.1996

ಡಾ.ಎಚ್.ನಿರಂಜನಮೂರ್ತಿ ರವರು ದಿನಾಂಕ.05.10.1988 ರಂದು "ಉಪನ್ಯಾಸಕ" ಹುದ್ದೆಗೆ ವರದಿ ಮಾಡಕೊಳ್ಳುವ ಪೂರ್ವದಲ್ಲಿ ದಿನಾಂಕ.29.03.1986 ರ ಈ ಕಚೇರಿ ಆದೇಶ ಸಂಖ್ಯೆ.KU/BOA/SRT/86/9841 ರ ಮೂಲಕ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇಲ್ಲಿ "ಕ್ಯೂರೇಟರ್ ಆಫ್ ಮ್ಯೂಸಿಯಮ್" ಹುದ್ದೆಗೆ ನೇಮಕಾತಿ ಹೊಂದಿ ಅದೇ ದಿನಾಂಕದಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ದಿನಾಂಕ.04.10.1988 ರ ವರೆಗೆ ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು "ಕ್ಯೂರೇಟರ್ ಆಫ್ ಮ್ಯೂಸಿಯಮ್" ಹುದ್ದೆಯಲ್ಲಿ ಎರಡು (2) ವರ್ಷಕ್ಕೂ ಹೆಚ್ಚಿನ ಅವಧಿಗೆ ಅಂದರೆ 2 ವರ್ಷ 6 ತಿಂಗಳು 5 ದಿನಗಳ ವರೆಗೆ ಸೇವೆ ಸಲ್ಲಿಸಿರುತ್ತಾರೆ.

ಡಾ.ಎಚ್.ನಿರಂಜನಮೂರ್ತಿ ರವರ "ಕ್ಯೂರೇಟರ್ ಆಫ್ ಮ್ಯೂಸಿಯಮ್" ಹುದ್ದೆಯಲ್ಲಿನ ಸೇವಾವಧಿಯನ್ನು ಪರಿಗಣಿಸಿದಂತೆ 1986 ರ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಅವರ ಸೇವಾ ಅರ್ಹತೆಗನುಗುಣವಾಗಿ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಸದರಿಯವರಿಗೆ "ಉಪನ್ಯಾಸಕರು (ಹಿರಿಯ ಶ್ರೇಣಿ)" ಪದೋನ್ನತಿ/ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಿ ದಿನಾಂಕ.14.12.1993 ರ ಈ ಕಚೇರಿ ಆದೇಶ ಸಂಖ್ಯೆ.KU/DPAR/SRT/93-94/6689 ನ್ನು ಹೊರಡಿಸಿದ್ದು ಇರುತ್ತದೆ.

ಸದರ ವಿಷಯದ ಕುರಿತು ಇಲ್ಲಿ ನಿವೇದಿಸುವುದೇನೆಂದರೆ, ಕರ್ನಾಟಕ ವಿಶ್ವವಿದ್ಯಾಲಯ ನೌಕರರ ನೇಮಕಾತಿ ನಿಯಮಗಳ ಅನುಶಾಸನ 1988 ರ ಕಂಡಿಕೆ ಸಂಖ್ಯೆ.12 ರ ಉಪ ಕಂಡಿಕೆ 3 (ಎ) ರ ಅನುಸಾರ ನೌಕರ ನೇಮಕಾತಿ ಹೊಂದಿ ಎರಡು ವರ್ಷಗಳ ಪರೀಕ್ಷಾರ್ಥ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿದ್ದಲ್ಲಿ ಅಂತಹ ಸಿಬ್ಬಂದಿಯ ಸೇವೆಯನ್ನು ಅವರು ಧಾರಣ ಮಾಡಿರುವ ಹುದ್ದೆಯಲ್ಲಿ ಧೃಡೀಕರಣಗೊಳಿಸುವುದು ವಾಡಿಕೆಯ ಕಾರ್ಯವಿಧಾನವಾಗಿರುತ್ತದೆ.

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಡಾ.ಎಚ್.ನಿರಂಜನಮೂರ್ತಿ ರವರು ವಿಶ್ವವಿದ್ಯಾಲಯದ "ಕ್ಯೂರೇಟರ್ ಆಫ್ ಮ್ಯೂಸಿಯಮ್" ಹುದ್ದೆಗೆ ನೇಮಕಾತಿ ಹೊಂದಿ ದಿನಾಂಕ.28.03.1988 ಕ್ಕೆ ಎರಡು ವರ್ಷಗಳ ಸೇವೆಯನ್ನು ಸಂಪೂರ್ಣಗೊಳಿಸಿದ್ದು, ಶ್ರೀಯುತರ ಸೇವಾ ದಾಖಲೆಗಳ ಅನುಸಾರ ಸದರಿಯವರು ಎರಡು ವರ್ಷಗಳ ಪರಿಕ್ಷಾರ್ಥ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿರುವುದಾಗಿ ತಿಳಿದುಬಂದಿರುವುದರಿಂದ ಮತ್ತು ಸದರಿ ಸೇವೆಯನ್ನು ಪರಿಗಣಿಸಿದಂತೆ "ಉಪನ್ಯಾಸಕರು (ಹಿರಿಯ ಶ್ರೇಣಿ)" ಪದೋನ್ನತಿ/ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಿರುವುದರಿಂದ ವಾಡಿಕೆಯ ಕಾರ್ಯವಿಧಾನದ ಪ್ರಕಾರ ದಿನಾಂಕ.22.08.2022 ರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಆಡಳಿತ ಮಂಡಳಿಯ

ಕುಲಸಚಿವರು

ಕುಲಪತಿಗಳು

CamScanner

ಅನುಮೋದನೆಗೆ ಒಳಪಟ್ಟು ಸದರಿಯವರ ಸೇವೆಯನ್ನು ಈ ಕೆಳಕಂಡಂತೆ ದೃಢೀಕರಿಸಿ ದಿನಾಂಕ.24.08.2022 ರ ಈ ಕಚೇರಿ ಆದೇಶ ಸಂಖ್ಯೆ.ಕವಿವಿ/ಸಿಆಸುವಿ/ಶಿಕ್ಷಕ-02 (E-35570)/2022/1283 ನ್ನು ಹೊರಡಿಸಲಾಗಿರುತ್ತದೆ.

ಹೆಸರು	ನೇಮಕಾತಿ ಹೊಂದಿದ ಹುದ್ದೆ/ಪದನಾಮ	ವಿಭಾಗ	ಸೇವೆಗೆ ವರದಿ ಮಾಡಿಕೊಂದ ದಿನಾಂಕ	ಎರಡು ವರ್ಷಗಳ ಪರೀಕ್ಷಾರ್ಥ ಅವಧಿ ಪೂರ್ಣಗೊಳಿಸಿದ ದಿನಾಂಕ
ಡಾ.ಎಚ್.ನಿರಂಜನಮೂರ್ತಿ	ಕ್ಯೂರೇಟರ್ ಆಫ್ ಮ್ಯೂಸಿಯಮ್	ಸಸ್ಯಶಾಸ್ತ್ರ	29.03.1986	28.03.1988

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, *ಡಾ.ಎಚ್.ನಿರಂಜನಮೂರ್ತಿ*, ಪ್ರಾಧ್ಯಾಪಕರು (ನಿವೃತ್ತ) ರವರ "*ಕ್ಯೂರೇಟರ್ ಆಫ್ ಮ್ಯೂಸಿಯಮ್*" ಹುದ್ದೆಯಲ್ಲಿನ ಸೇವೆಯ ಸೇವಾ ದೃಢೀಕರಣಗೊಳಿಸುವ ಬಗ್ಗೆ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ

ಡಾ. ಎಚ್. ನಿರಂಜನಮೂರ್ತಿ, ಪ್ರಾಧ್ಯಾಪಕರು (ನಿವೃತ್ತ), ಇವರ "ಕ್ಯೂರೇಟರ್ ಆಫ್ ಮ್ಯೂಸಿಯಮ್" ಹುದ್ದೆಯಲ್ಲಿನ ಸೇವೆಯ ಸೇವಾ ದೃಢೀಕರಣಗೊಳಿಸುವ ವಿಷಯವಾಗಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ದೃಢೀಕರಿಸಿತು.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-06: ವಿಷಯ-: ಶ್ರೀ ಅಕ್ಷಯ ಮೃತ್ಯುಂಜಯ ಸಂಗಮ ಇವರನ್ನು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು.

ಪ್ರಸ್ತಾವನೆ :

ಶ್ರೀ ಅಕ್ಷಯ ಮೃತ್ಯುಂಜಯ ಸಂಗಮ ಇವರ ತಂದೆಯಾದ ದಿವಂಗತ ಶ್ರೀ ಮೃತ್ಯುಂಜಯ ಶೇಖರಯ್ಯ ಸಂಗಮ ಇವರು ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇಲ್ಲಿ ಸಹಾಯಕ ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ 16.06.2022 ರಂದು ನಿಧನರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ದಿನಾಂಕ 15.09.2022 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ದಿವಂಗತ ಶ್ರೀ ಮೃತ್ಯುಂಜಯ ಶೇಖರಯ್ಯ ಸಂಗಮ ಇವರು ದಿನಾಂಕ: 04.04.2001 ರಂದು ಸಿಪಾಯಿ ಹುದ್ದೆಗೆ ನೇಮಕಾತಿ ಹೊಂದಿದವರಾಗಿರುತ್ತಾರೆ.

ಅನುಕಂಪದ ಆಧಾರದ ಮೇಲೆ ನೇಮಕಾತಿ ಅನುಶಾಸನ (vide Notification No. S&S/4555 dated: 23.01.1982) ಪ್ರಕಾರ ಈ ಸಂಬಂಧವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಶರತ್ತುಗಳಿಗೆ ಅನುಗುಣವಾಗಿ ಅರ್ಹತೆಯನ್ನು ಹೊಂದಿರಬೇಕಾಗಿರುತ್ತದೆ.

ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ದಿನಾಂಕ: 12.09.1996 ರ ಸರ್ಕಾರದ ಅಧಿಸೂಚನೆ ನಂ. ಡಿಪಿಎಆರ್/100/ಎಸ್‌ಸಿಎ/95 ರ ಮೂಲಕ ಕೆ.ಸಿ.ಎಸ್. (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಹಾಗೂ ತತ್ಸಂಬಂಧಿತ ತಿದ್ದುಪಡಿ ನಿಯಮಗಳು/ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.

3) Eligibility for Appointment:

(1) Appointment on compassionate grounds under these rules shall not be claimed as a matter of right and shall not be given as a matter of course.

(2) Appointment under these rules shall be restricted to the dependent of a deceased Government Servant in the following order of preference, namely:

[2][(i) in the case of the deceased male Government Servant:

(a) the widow;

(b) a son, if widow is not eligble or for any valid reason she is not willing to accept the appointment;

(c) an unmarried daughter, if the widow and son are not eligible or for any valid reason they are not willing to accept the appointment.]

[1][(d) a widowed daughter, if the widow, son and unmarried daughter are not eligible or for any valid reason they are not willing to accept the appointment;]

[2][(ii) in the case of the deceased female Government Servant:

(a) a son;

(b) an unmarried daughter, if the son is not eligible or for any valid reason he is not willing to accept the appointment;

(c) the widower, if the son and daughter are not eligible or for any valid reason they are not willing to accept in the appointment.]

[1][(d) a widowed daughter, if the widower, son and unmarried daughter are not eligible or for any valid reason they are not willing to accept the appointment.]

(3) An adoped daughter, if the widower, son and unmarried daughter are not eligible for appointment under these rules.

[3](4) A person against whom at the time of making application a criminal case is under investigation of trial on the charge of having committed murder of the deceased Government Servant or for abetting the commission of such offence shall not be eligible for appointment under these rules.]

ಮೇಲ್ಕಾಣಿಸಿದ 3 ರ ನಿಯಮದ ಉಪ ನಿಯಮ 2(2)(i)(a) ಪ್ರಕಾರ ನಿಧನ ಹೊಂದಿದ ಪುರುಷ ಸರ್ಕಾರಿ ನೌಕರನ ಪತ್ನಿ ಅಥವಾ ಒಂದು ವೇಳೆ ಯಾವುದೋ ಕಾರಣಕ್ಕೆ ಪತ್ನಿ ನೇಮಕಾತಿ ಬಯಸದಿದ್ದಲ್ಲಿ ಮಗನಿಗೆ, ಒಂದು ವೇಳೆ ಮಗನಿಗೆ ಅರ್ಹತೆ

ಕುಲಸಚಿವರು 1/12/22

ಕುಲಪತಿಗಳು

CamScanner

ಇಲ್ಲದಿದ್ದಲ್ಲಿ, ಅಥವಾ ಇನ್ನಾವುದೇ ಯುಕ್ತ ಕಾರಣಗಳಿಂದಾಗಿ ಅವನು ನೇಮಕಾತಿ ಬಯಸದಿದ್ದಲ್ಲಿ ವಿಧುರನಿಗೆ, ಒಂದು ವೇಳೆ ವಿಧುರ, ವಿವಾಹಿತ ಮಗ ಹಾಗೂ ಮಗಳಿಗೆ ಅರ್ಹತೆಯು ಇಲ್ಲದಿದ್ದಲ್ಲಿ ಅಥವಾ ಇನ್ನಾವುದೇ ಯುಕ್ತ ಕಾರಣಗಳಿಗಾಗಿ ಅವರುಗಳು ನೇಮಕಾತಿಗೆ ಬಯಸದಿದ್ದಲ್ಲಿ ವಿಧವೆ ಮಗಳಿಗೆ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ತಿದ್ದುಪಡಿ ಆದೇಶ ದಿನಾಂಕ: 09.04.2021 ರ ಪ್ರಕಾರ ವಿವಾಹಿತ ಮಗಳನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಲು ಅವಕಾಶವಿದೆ.

ಅರ್ಜಿದಾರರು ಉಪ ತಹಶೀಲ್ದಾರ ಧಾರವಾಡ-ಹುಬ್ಬಳ್ಳಿ ಇವರಿಂದ ಪಡೆದು ಸಲ್ಲಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ RD5019305138825 ದಿನಾಂಕ 08.09.2022 ಪ್ರಕಾರ ಮೃತ ಕುಟುಂಬದ ಜೀವಂತ ಸದಸ್ಯರ ವಿವರ ಈ ಕೆಳಗಿನಂತಿರುತ್ತದೆ.

ಅ.ನಂ.	ಹೆಸರು	ವಯಸ್ಸು	ಮೃತರ ಜೊತೆಗೆ ಸಂಬಂಧ	ವೈವಾಹಿಕ ಸ್ಥಿತಿ
1)	ಶ್ರೀಮತಿ ವಿಜಯಲಕ್ಷ್ಮೀ ಕೋಂ. ಮೃತ್ಯುಂಜಯ ಸಂಗಮ	44	ಪತ್ನಿ	ವಿಧವೆ/ವಿಧುರ
2)	ಅಕ್ಷಯ ಮೃತ್ಯುಂಜಯ ಸಂಗಮ	21	ಮಗ	ಅವಿವಾಹಿತ
3)	ಅನುಷಾ ಮೃತ್ಯುಂಜಯ ಸಂಗಮ	18	ಮಗಳು	ಅವಿವಾಹಿತಳು

ಮೇಲೆ ಓದಲಾದ ಉಪನಿಯಮದನ್ವಯ ಹಾಗೂ ಮೇಲ್ಕಾಣಿಸಿದ ದೃಢೀಕರಣ ಪತ್ರದಂತೆ ಮೃತರ ಮಗನಾದ ಹಾಗೂ ಅರ್ಜಿದಾರರಾದ ಶ್ರೀ ಅಕ್ಷಯ ಮೃತ್ಯುಂಜಯ ಸಂಗಮ ಇವರು ನೇಮಕಾತಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದನ್ನು ಪರಿಶೀಲಿಸಬಹುದಾಗಿದೆ. ಮುಂದುವರೆದು, ಮೇಲ್ಕಾಣಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರದಲ್ಲಿ ಕಾಣಿಸಲಾದ ಅರ್ಜಿದಾರರ ತಾಯಿಯಾದ ಶ್ರೀಮತಿ ವಿಜಯಲಕ್ಷ್ಮೀ ಕೋಂ. ಮೃತ್ಯುಂಜಯ ಸಂಗಮ ಮತ್ತು ಸಹೋದರಿಯಾದ ಕುಮಾರಿ ಅನುಷಾ ಮೃತ್ಯುಂಜಯ ಸಂಗಮ ಇವರುಗಳು ಶ್ರೀ ಅಕ್ಷಯ ಮೃತ್ಯುಂಜಯ ಸಂಗಮ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ತಮ್ಮ ಅಭ್ಯಂತರವಿಲ್ಲವೆಂದು ದಿನಾಂಕ: 13.09.2022 ಮತ್ತು 14.09.2022 ರಂದು ಕ್ರಮವಾಗಿ ಹಾಗೂ ಪ್ರತ್ಯೇಕವಾಗಿ ನೋಟರಿ ಮಾಡಿಸಿದ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 4 ಈ ಕೆಳಗಿನಂತಿರುತ್ತದೆ.

4) Conditions of Appointment:

Appointment on compassionate grounds under these rules shall be subject to the following conditions namely:

(1) The family of the deceased Government Servant should be in a financial crisis or destitution.

Explaintion : (a) Family of deceased Government Servent shall be considered to be in financial crisis or destitution if the recurring monthly income of the family from all sources is less than the total emoluments including Dearness allowance, House Rent Allowance and City Compensatory Allowance admissible at Bangalore on the average of the minimum and the maximum of the scale of pay of the post of the First Division Assistant, as on the date of making application for compassionate appointment. For calcalating such monthly income, the income from family pension, lumpsum pensionary benefits and interest earned thereon shall be excluded.

(b) Recurring monthly income form all sources other than family pension, lumpsum pensionary benefits and the interest earned thereon, of the family for the purpose of this rule shall be computed by the Head of the Office or the Head of the Department or the appointing authority.

(i) on the basis of the last annual property return filed by the deceased Government Servant and if, for any reason it is not available, on the basis of the certificate of income issued by a Revenue Officer not below the rank of Tashildar, and

(ii) in case any member of the family of the deceased Government Servant is employed in any State or Central Government Service or a public or private sector undertaking or a private establishment, on the basis of a certificate issued by his employer and in case such member is self employed on the basis of certificate issued by a revenue officer not below the rank of Tahsildar.

[1][Provided that, nothing in sub-rule (i), shall apply to Government Servants belonging to Group-C & D]

ಕುಲಸಚಿವರು

ಕುಲಪತಿಗಳು

CamScanner

ಸರ್ಕಾರದ ಆದೇಶ ಸಂಖ್ಯೆ. ಸಿ.ಆ.ಸು.ಇ. 26 ಸೇಅನೇ 2018 ದಿನಾಂಕ: 9-04-2021 ರ ಪ್ರಕಾರ ಮೃತ ಸರ್ಕಾರಿ ನೌಕರನ ಕುಟುಂಬ ಆರ್ಥಿಕ ಅಡಚಣೆಯಲ್ಲಿರಬೇಕೆಂಬ ಮತ್ತು ಅವರು ಈ ನಿಟ್ಟಿನಲ್ಲಿ ಆದಾಯ ಪ್ರಮಾಣಪತ್ರ ಸಲ್ಲಿಸುವ ಷರತ್ತು ಗ್ರೂಪ್-'ಸಿ' ಮತ್ತು 'ಡಿ'ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದಲ್ಲವೆಂದು ತಿದ್ದುಪಡಿಗೊಂಡಿರುತ್ತದೆ. ಪ್ರಸ್ತುತ ಪ್ರಕರಣಗದಲ್ಲಿ ಮೃತರಾಗಿರುವ ದಿವಂಗತ ಶ್ರೀ ಮೃತ್ಯುಂಜಯ ಎಸ್. ಸಂಗಮ ಇವರು ಗ್ರೂಪ್ 'ಸಿ' ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ ಈ ಪ್ರಕರಣದಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿ ಪರಿಗಣನೆಗೆ ಬರುವುದಿಲ್ಲ

(2) Person seeking appointment shall be within the age limit specified for the post in the relevant rules of recruitment specilly made in respect of any service or post read with sub rule 93) of rule 6 of the Karnataka Civil Services (General Recruitment) Rules, 1977 and where it is not so specified such person shall be within the age limits specified in the Karnataka Civil Services (General Recruitment) Rules, 1977.

ಈ ಉಪನಿಯಮದ ಪ್ರಕಾರ ಹಾಗೂ ಪ್ರಚಲಿತ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ಸೆನೆನಿ 2008 ದಿ:15.01.2009 ರ ಪ್ರಕಾರ ಹಿಂದೂ ವೀರಶೈವ ಲಿಂಗಾಯತ ಸಾಮಾನ್ಯ ವರ್ಗದ (3ಬಿ) ಅಭ್ಯರ್ಥಿಯಾಗಿದ್ದು, ಸದರಿ ನೇಮಕಾತಿಗೆ 35 ವರ್ಷಗಳ ವಯೋಮಿತಿ ಇರುತ್ತದೆ. ಅರ್ಜಿದಾರರು ಹಿಂದೂ ವೀರಶೈವ ಲಿಂಗಾಯತ ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಚಾರ್ಯರು, ಪವನ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಬಾರಾಕೊಟ್ರಿ, ಕರ್ನಾಟಕ ವಿಶ್ವವಿದ್ಯಾಲಯ ರೋಡ, ಧಾರವಾಡ ಇವರಿಗೆ ಕಳುಹಿಸಲಾಗಿ ನೈಜವಾಗಿರುವ ಬಗ್ಗೆ ಪತ್ರ ದಿನಾಂಕ 06.10.2022 ರ ಪತ್ರ ಸ್ವೀಕೃತವಾಗಿದ್ದು, ಅದರ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕ 10.07.2001 ಇದ್ದು ಅರ್ಜಿ ಸಲ್ಲಿಸಿದ ದಿನದಂದು 21 ವರ್ಷ 02 ತಿಂಗಳು 05 ದಿನಗಳು ಪೂರ್ಣಗೊಂಡಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂ. ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ: 12.09.1996 ರ ಉಪನಿಯಮ 3 ಹಾಗೂ 4 ರ ಪ್ರಕಾರ ಇತರೆ ಷರತ್ತುಗಳು ಈ ಕೆಳಗಿನಂತಿರುತ್ತದೆ.

(3) Person seeking appointment should possess the minimum qualification specified for the post in the relevant rules of recruitment specially made in respect of any service or post.

[1][Provided the nothing in this sub rule (5) of rule 5 of the Karnataka Civil Services (General Recruitment) Rules, 1977 in so for as it relates to educational qualification, shall apply to appointment under these rules to any Group 'D' post.']

[2][(4) Appointment shall be confined to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Sceretariat as may be revised from time to time and any other post in either of the groups as may be specified by the Government from time to time.]

(5) Appointment shal be made only against a direct recruitment vacancy.

ಈ ಮೇಲಿನ ಉಪನಿಯಮದ ಪ್ರಕಾರ ಈ ವಿಶ್ವವಿದ್ಯಾಲಯದ ನೌಕರರ ನೇಮಕಾತಿ ಅನುಶಾಸನ 1988 ರ ಪ್ರಕಾರ ಪದವಿ ಪೂರ್ವ ಹಾಗೂ ಅದಕ್ಕೆ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಸಿ' ವೃಂದದ ಕಿರಿಯ ಸಹಾಯಕ ಹುದ್ದೆಗೆ ಅಥವಾ 4 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಡಿ' ವೃಂದದ ಹುದ್ದೆಗೆ ಹಾಗೂ ಇದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಸಫಾಯಿ ಕರ್ಮಚಾರಿ (ಜಾಡಮಾಲಿ) ಹುದ್ದೆಗೆ ಸಾಮಾನ್ಯವಾಗಿ ನೇಮಕಾತಿ ಮಾಡಲಾಗುತ್ತಿದೆ.

ಅದರ ಅನುಸಾರ ಅರ್ಜಿದಾರರ ಶೈಕ್ಷಣಿಕ ಅರ್ಹತೆಯು ದ್ವಿತೀಯ ಪಿ.ಯು.ಸಿ. ಪ್ರಮಾಣ ಪತ್ರವನ್ನು ದೃಢೀಕರಿಸಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅಂಕಪಟ್ಟಿಗಳನ್ನು ಕಳುಹಿಸಲಾಗಿತ್ತು. ಅದಕ್ಕೆ ಸಹಾಯಕ ನಿರ್ದೇಶಕರು,(ಪರೀಕ್ಷೆ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ತಮ್ಮ ಪತ್ರ ಪ.ಪೂ.ಶಿ./ದ್ವಿಪ್ರಶಾ/ಅಪಪ/2022-23/ ದಿನಾಂಕ 26.09.2022 ರ ಮೂಲಕ, ದ್ವಿತೀಯ ಪಿ.ಯು.ಸಿ. ಪ್ರಮಾಣಪತ್ರ ಈ ಇಲಾಖೆಯ ದಾಖಲೆಗಳೊಡನೆ ಪರಿಶೀಲಿಸಲಾಗಿ ಅದು ನೈಜವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 5 ಈ ಕೆಳಗಿನಂತಿರುತ್ತದೆ.

(5) Application for appointment :

Every dependent of a deceased Government Servant, Seeking appointment under these rules shall make an application within one year from the date of death of the Government Servant, in such from, as may be notified by the Government, from time to time, to the Head of the Department under whom the deceased Government servant was working.

ಕುಲಸಚಿವರು 9/12/22

ಕುಲಪತಿಗಳು

CamScanner

[1][Provided that in the case of a minor he must have attained the age of eighteen years within one year from the date of death of the Government Servant and he must make an application within one year thereafter.]

ಅರ್ಜಿದಾರರ ತಂದೆ ಹಾಗೂ ಈ ವಿಶ್ವವಿದ್ಯಾಲಯದ ನೌಕರರರಾದ ದಿವಂಗತ ಶ್ರೀ ಮೃತ್ಯುಂಜಯ ಎಸ್. ಸಂಗಮ ಇವರು ದಿನಾಂಕ 16.06.2022 ರಂದು ನಿಧನರಾಗಿರುತ್ತಾರೆಂದು, ಸರ್ಕಾರದ ಜನನ ಮತ್ತು ಮರಣಗಳ ಮುಖ್ಯ ರಜಿಸ್ಟ್ರಾರ್ ಇವರಿಂದ ಪಡೆದ ಮರಣ ಪ್ರಮಾಣ ಪತ್ರದ ನೋಂದಣಿ ಸಂಖ್ಯೆ. 803083/ಟಿ/ಡಿ/2022/004755 ದಿನಾಂಕ 13.07.2022 ರಂದು ಪಡೆದು ಸಲ್ಲಿಸಿದ ಮರಣ ಪ್ರಮಾಣಪತ್ರದಲ್ಲಿ ಉಲ್ಲೇಖ ಇರುತ್ತದೆ. ಈ ಉಪ ನಿಯಮದ ಪ್ರಕಾರ ನೇಮಕಾತಿಗೆ ನೌಕರರು ಮೃತರಾದ ನಿಗದಿತ ಒಂದು ವರ್ಷದ ಅವಧಿಯಲ್ಲಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 6 ರ ಆಯ್ದ ಭಾಗ ಈ ಕೆಳಗಿನಂತಿರುತ್ತದೆ.

(6) Appointment by the Competent Authority :

(1) On receipt of the application under rule 5, the Head of the Department, if satisfied that the applicant fulfills all the conditions specified under these rules, shall appoint, where he is the appointing authority and if not direct the appropriate appointing authority to issue the order of appointment.

(2) The appointment undere sub-rule (1) shall be made as far as possible within a period of three months from the date of receipt of the application under rule 5.

ಶ್ರೀ ಅಕ್ಷಯ ಮೃತ್ಯುಂಜಯ ಸಂಗಮ ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣಗೊಂಡಿರುವುದರಿಂದ ಮೇಲ್ಕಾಣಿಸಿದ ಕವಿವಿ ಅನುಶಾಸನವನ್ನು ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕ ಮಾಡುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

ಶ್ರೀ ಅಕ್ಷಯ ಮೃತ್ಯುಂಜಯ ಸಂಗಮ ಇವರನ್ನು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಅನುಮೋದಿಸಿತು. ಮುಂದುವರೆದು, ನೇಮಕಾತಿ ಹೊಂದಿದ ಎರಡು ವರ್ಷದೊಳಗಾಗಿ ಕಂಪ್ಯೂಟರ ಜ್ಞಾನವನ್ನು ಹೊಂದಿ ಅದರ ಬಗ್ಗೆ ದಾಖಲಾತಿ/ ಪ್ರಮಾಣ ಪತ್ರ/ ಅಂಕಪಟ್ಟಿಯನ್ನು ಸಲ್ಲಿಸುವುದು ಹಾಗೂ ಮುಂದಿನ ಹುದ್ದೆಗೆ ಬಡ್ತಿ ಹೊಂದಲು ಸೇವೆಗೆ ಸೇರಿದ ಒಂದು ವರ್ಷದ ಒಳಗಾಗಿ ಇಲಾಖಾ ಪರೀಕ್ಷೆ ಉತ್ತೀರ್ಣರಾಗುವ ಷರತ್ತನ್ನು ನಿಗದಿಪಡಿಸಿದೆ.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-07: ವಿಷಯ:- ಶ್ರೀ ನಿತೀಶ ವೀರನಗೌಡ ಪಾಟೀಲ ಇವರನ್ನು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು.

ಪ್ರಸ್ತಾವನೆ :

ಶ್ರೀ ನಿತೀಶ ವೀರನಗೌಡ ಪಾಟೀಲ ಇವರ ತಂದೆಯಾದ ದಿವಂಗತ ದಿವಂಗತ ಶ್ರೀ ವೀರನಗೌಡ ಧರ್ಮಗೌಡ ಪಾಟೀಲ ಇವರು ಕೆಎಲ್ಎ ಪಬ್ಲಿಕ್ ಶಾಲೆ, ಧಾರವಾಡ ಇಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ 13.05.2021 ರಂದು ನಿಧನರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ದಿನಾಂಕ 15.09.2022 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಶ್ರೀ ನಿತೀಶ ವೀರನಗೌಡ ಪಾಟೀಲ ಇವರ ತಂದೆಯಾದ ದಿವಂಗತ ಶ್ರೀ ವೀರನಗೌಡ ಧರ್ಮಗೌಡ ಪಾಟೀಲ ಇವರು ಕೆಎಲ್ಎ ಪಬ್ಲಿಕ್ ಶಾಲೆ, ಧಾರವಾಡ ಇಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಎಂದು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದಿನಾಂಕ 14.08.2022 ರಂದು ನಿಧನರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ನಿಗದಿತ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ದಿನಾಂಕ 15.09.2022 ರಂದು ಮನವಿಯನ್ನು ಸಲ್ಲಿಸಿರುತ್ತಾರೆ. ದಿವಂಗತ ಶ್ರೀ ವೀರನಗೌಡ ಧರ್ಮಗೌಡ ಪಾಟೀಲ ಇವರು ದಿನಾಂಕ: 08.06.1996 ರಂದು ದೈಹಿಕ ಶಿಕ್ಷಣ ಶಿಕ್ಷಕರು ಹುದ್ದೆಗೆ ನೇಮಕಾತಿ ಹೊಂದಿದವರಾಗಿರುತ್ತಾರೆ.

ಅನುಕಂಪದ ಆಧಾರದ ಮೇಲೆ ನೇಮಕಾತಿ ಅನುಶಾಸನ (vide Notification No. S&S/4555 dated: 23.01.1982) ಪ್ರಕಾರ ಈ ಸಂಬಂಧವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಶರತ್ತುಗಳಿಗೆ ಅನುಗುಣವಾಗಿ ಅರ್ಹತೆಯನ್ನು ಹೊಂದಿರಬೇಕಾಗಿರುತ್ತದೆ.
ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ದಿನಾಂಕ: 12.09.1996 ರ ಸರ್ಕಾರದ ಅಧಿಸೂಚನೆ ನಂ. ಡಿಪಿಎಆರ್/100/ಎಸ್ಸಿಎ/95 ರ ಮೂಲಕ ಕೆ.ಸಿ.ಎಸ್. (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಹಾಗೂ ತತ್ಸಂಬಂಧಿತ ತಿದ್ದುಪಡಿ ನಿಯಮಗಳು/ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.

3) Eligibility for Appointment:

(1) Appointment on compassionate grounds under these rules shall not be claimed as a matter of right and shall not be given as a matter of course.

(2) Appointment under these rules shall be restricted to the dependent of a deceased Government Servant in the following order of preference, namely:

[2][(i) in the case of the deceased male Government Servant:

(a) the widow;

(b) a son, if widow is not eligble or for any valid reason she is not willing to accept the appointment;

(c) an unmarried daughter, if the widow and son are not eligible or for any valid reason they are not willing to accept the appointment.]

[1][(d) a widowed daughter, if the widow, son and unmarried daughter are not eligible or for any valid reason they are not willing to accept the appointment;]

[2][(ii) in the case of the deceased female Government Servant:

(a) a son;

(b) an unmarried daughter, if the son is not eligible or for any valid reason he is not willing to accept the appointment;

(c) the widower, if the son and daughter are not eligible or for any valid reason they are not willing to accept in the appointment.]

[1][(d) a widowed daughter, if the widower, son and unmarried daughter are not eligible or for any valid reason they are not willing to accept the appointment.]

(3) An adoped daughter, if the widower, son and unmarried daughter are not eligible for appointment under these rules.

[3](4) A person against whom at the time of making application a criminal case is under investigation of trial on the charge of having committed murder of the deceased Government Servant or for abetting the commission of such offence shall not be eligible for appointment under these rules.]

ಮೇಲ್ಕಾಣಿಸಿದ 3 ರ ನಿಯಮದ ಉಪ ನಿಯಮ 2(2)(ಎ)(ಚ) ಪ್ರಕಾರ ನಿಧನ ಹೊಂದಿದ ಪುರುಷ ಸರ್ಕಾರಿ ನೌಕರನ ಪತ್ನಿ ಅಥವಾ ಒಂದು ವೇಳೆ ಯಾವುದೋ ಕಾರಣಕ್ಕೆ ಪತ್ನಿ ನೇಮಕಾತಿ ಬಯಸದಿದ್ದಲ್ಲಿ ಮಗನಿಗೆ, ಒಂದು ವೇಳೆ ಮಗನಿಗೆ ಅರ್ಹತೆ ಇಲ್ಲದಿದ್ದಲ್ಲಿ, ಅಥವಾ ಇನ್ನಾವುದೇ ಯುಕ್ತ ಕಾರಣಗಳಿಂದಾಗಿ ಅವನು ನೇಮಕಾತಿ ಬಯಸದಿದ್ದಲ್ಲಿ ವಿಧುರನಿಗೆ, ಒಂದು ವೇಳೆ

9/12/22

ಕುಲಸಚಿವರು

ಕುಲಪತಿಗಳು

CamScanner

ವಿಧುರ, ವಿವಾಹಿತ ಮಗ ಹಾಗೂ ಮಗಳಿಗೆ ಅರ್ಹತೆಯು ಇಲ್ಲದಿದ್ದಲ್ಲಿ ಅಥವಾ ಇನ್ನಾವುದೇ ಯುಕ್ತ ಕಾರಣಗಳಿಗಾಗಿ ಅವರುಗೆಳು ನೇಮಕಾತಿಗೆ ಬಯಸದಿದ್ದಲ್ಲಿ ವಿಧವೆ ಮಗಳಿಗೆ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ತಿದ್ದುಪಡಿ ಆದೇಶ ದಿನಾಂಕ: 09.04.2021 ರ ಪ್ರಕಾರ ವಿವಾಹಿತ ಮಗಳನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸಲು ಅವಕಾಶವಿದೆ.

ಅರ್ಜಿದಾರರು ಉಪ ತಹಶೀಲ್ದಾರ ಧಾರವಾಡ-ಹುಬ್ಬಳ್ಳಿ ಇವರಿಂದ ಪಡೆದು ಸಲ್ಲಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ RD5014813051383 ದಿನಾಂಕ 12.09.2022 ಪ್ರಕಾರ ಮೃತ ಕುಟುಂಬದ ಜೀವಂತ ಸದಸ್ಯರ ವಿವರ ಈ ಕೆಳಗಿನಂತಿರುತ್ತದೆ.

ಅ.ನಂ.	ಹೆಸರು	ವಯಸ್ಸು	ಮೃತರ ಜೊತೆಗೆ ಸಂಬಂಧ	ವೈವಾಹಿಕ ಸ್ಥಿತಿ
1)	ಶ್ರೀಮತಿ ಸುಜಾತಾ ಕೋಂ. ವೀರನಗೌಡ ಪಾಟೀಲ	49	ಪತ್ನಿ	ವಿಧವೆ/ವಿಧುರ
2)	ನಿತೀಶ ವೀರನಗೌಡ ಪಾಟೀಲ	23	ಮಗ	ಅವಿವಾಹಿತ
3)	ನಯನಾ ವೀರನಗೌಡ ಪಾಟೀಲ	21	ಮಗಳು	ಅವಿವಾಹಿತಳು

ಮೇಲೆ ಓದಲಾದ ಉಪನಿಯಮದನ್ವಯ ಹಾಗೂ ಮೇಲ್ಕಾಣಿಸಿದ ದೃಢೀಕರಣ ಪತ್ರದಂತೆ ಮೃತರ ಮಗನಾದ ಹಾಗೂ ಅರ್ಜಿದಾರರಾದ ಶ್ರೀ ನಿತೀಶ ವೀರನಗೌಡ ಪಾಟೀಲ ಇವರು ನೇಮಕಾತಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದನ್ನು ಪರಿಶೀಲಿಸಬಹುದಾಗಿದೆ. ಮುಂದುವರೆದು, ಮೇಲ್ಕಾಣಿಸಿದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರದಲ್ಲಿ ಕಾಣಿಸಲಾದ ಅರ್ಜಿದಾರರ ತಾಯಿಯಾದ ಶ್ರೀಮತಿ ಸುಜಾತಾ ಕೋಂ. ವೀರನಗೌಡ ಪಾಟೀಲ ಮತ್ತು ಸಹೋದರಿಯಾದ ಕುಮಾರಿ ನಯನಾ ವೀರನಗೌಡ ಪಾಟೀಲ ಇವರುಗಳು ಶ್ರೀ ನಿತೀಶ ವೀರನಗೌಡ ಪಾಟೀಲ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ತಮ್ಮ ಅಭ್ಯಂತರವಿಲ್ಲವೆಂದು ದಿನಾಂಕ: 20.09.2022 ರಂದು ಕ್ರಮವಾಗಿ ಹಾಗೂ ಪ್ರತ್ಯೇಕವಾಗಿ ನೋಟರಿ ಮಾಡಿಸಿದ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 4 ಈ ಕೆಳಗಿನಂತಿರುತ್ತದೆ.

4) Conditions of Appointment:

Appointment on compassionate grounds under these rules shall be subject to the following conditions namely:

(1) The family of the deceased Government Servant should be in a financial crisis or destitution.

Explaintion : (a) Family of deceased Government Servent shall be considered to be in financial crisis or destitution if the recurring monthly income of the family from all sources is less than the total emoluments including Dearness allowance, House Rent Allowance and City Compensatory Allowance admissible at Bangalore on the average of the minimum and the maximum of the scale of pay of the post of the First Division Assistant, as on the date of making application for compassionate appointment. For calcalating such monthly income, the income from family pension, lumpsum pensionary benefits and interest earned thereon shall be excluded.

(b) Recurring monthly income form all sources other than family pension, lumpsum pensionary benefits and the interest earned thereon, of the family for the purpose of this rule shall be computed by the Head of the Office or the Head of the Department or the appointing authority.

(i) on the basis of the last annual property return filed by the deceased Government Servant and if, for any reason it is not available, on the basis of the certificate of income issued by a Revenue Officer not below the rank of Tashildar, and

(ii) in case any member of the family of the deceased Government Servant is employed in any State or Central Government Service or a public or private sector undertaking or a private establishment, on the basis of a certificate issued by his employer and in case such member is self employed on the basis of certificate issued by a revenue officer not below the rank of Tahsildar.

[1][Provided that, nothing in sub-rule (i), shall apply to Government Servants belonging to Group-C & D]

ಸರ್ಕಾರದ ಆದೇಶ ಸಂಖ್ಯೆ. ಸಿ.ಆ.ಸು.ಇ. 26 ಸೇಅನೇ 2018 ದಿನಾಂಕ: 9-04-2021 ರ ಪ್ರಕಾರ ಮೃತ ಸರ್ಕಾರಿ ನೌಕರನ ಕುಟುಂಬ ಆರ್ಥಿಕ ಅಡಚಣೆಯಲ್ಲಿರಬೇಕೆಂಬ ಮತ್ತು ಅವರು ಈ ನಿಟ್ಟಿನಲ್ಲಿ ಆದಾಯ ಪ್ರಮಾಣಪತ್ರ ಸಲ್ಲಿಸುವ ಷರತ್ತು ಗ್ರೂಪ್-'ಸಿ' ಮತ್ತು 'ಡಿ'ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದಲ್ಲವೆಂದು ತಿದ್ದುಪಡಿಗೊಂಡಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ

ಕುಲಸಚಿವರು

ಕುಲಪತಿಗಳು

CamScanner

ಮೃತಪಟ್ಟಿರುವ ನಿವೃತ್ತಿ ಶ್ರೀ ವೀರನಗೌಡ ಧರ್ಮಗೌಡ ಪಾಟೀಲ ಇವರು ಗ್ರೂಪ್ 'ಸಿ' ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ ಈ ಪ್ರಕರಣದಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿ ಪರಿಗಣನೆಗೆ ಬರುವುದಿಲ್ಲ

(2) Person seeking appointment shall be within the age limit specified for the post in the relevant rules of recruitment specily made in respect of any service or post read with sub rule 93) of rule 6 of the Karnataka Civil Services (General Recruitment) Rules, 1977 and where it is not so specified such person shall be within the age limits specified in the Karnataka Civil Services (General Recruitment) Rules, 1977.

ಈ ಉಪನಿಯಮದ ಪ್ರಕಾರ ಹಾಗೂ ಪ್ರಚಲಿತ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 55 ಸೆಸೆನಿ 2008 ದಿನಾಂಕ 25.01.2008 ರ ಪ್ರಕಾರ ಹಿಂದೂ ರೆಡ್ಡಿ ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿದ್ದು, ಸದರಿ ನೇಮಕಾತಿಗೆ 35 ವರ್ಷಗಳ ವಯೋಮಿತಿ ಇರುತ್ತದೆ. ಅರ್ಜಿದಾರರು ಹಿಂದೂ ರೆಡ್ಡಿ ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಮುಖ್ಯೋಪಾಧ್ಯಾಯರು, ಶಾಂತಿ ಸದನ ಪ್ರೌಢ ಶಾಲೆ, 12ನೇ ಅಡ್ಡರಸ್ತೆ, ನಿರ್ಮಲನಗರ, ಧಾರವಾಡ ಇವರಿಗೆ ಕಳುಹಿಸಲಾಗಿ ನೈಜವಾಗಿರುವ ಬಗ್ಗೆ ಪತ್ರ ದಿನಾಂಕ: 20.10.2022 ರ ಪತ್ರ ಸ್ವೀಕೃತವಾಗಿದ್ದು, ಅದರ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕ 22.04.1999 ಇದ್ದು ಅರ್ಜಿ ಸಲ್ಲಿಸಿದ ದಿನದಂದು 23 ವರ್ಷ 04 ತಿಂಗಳು 24 ದಿನಗಳು ಪೂರ್ಣಗೊಂಡಿರುತ್ತದೆ.

ಸರ್ಕಾರಿ ಅಧಿಸೂಚನೆ ಸಂ. ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ: 12.09.1996 ರ ಉಪನಿಯಮ 3 ಹಾಗೂ 4 ರ ಪ್ರಕಾರ ಇತರೆ ಷರತ್ತುಗಳು ಈ ಕೆಳಗಿನಂತಿರುತ್ತದೆ.

(3) Person seeking appointment should possess the minimum qualification specified for the post in the relevant rules of recruitment specially made in respect of any service or post.

[1][Provided the nothing in this sub rule (5) of rule 5 of the Karnataka Civil Services (General Recruitment) Rules, 1977 in so for as it relates to educational qualification, shall apply to appointment under these rules to any Group 'D' post.']

[2][(4) Appointment shall be confined to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Sceretariat as may be revised from time to time and any other post in either of the groups as may be specified by the Government from time to time.]

(5) Appointment shal be made only against a direct recruitment vacancy.

ಈ ಮೇಲಿನ ಉಪನಿಯಮದ ಪ್ರಕಾರ ಈ ವಿಶ್ವವಿದ್ಯಾಲಯದ ನೌಕರರ ನೇಮಕಾತಿ ಅನುಶಾಸನ 1988 ರ ಪ್ರಕಾರ ಪದವಿ ಮೂರ್ವ ಹಾಗೂ ಅದಕ್ಕೆ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಸಿ' ವೃಂದದ ಕಿರಿಯ ಸಹಾಯಕ ಹುದ್ದೆಗೆ ಅಥವಾ 4 ನೇ ತರಗತಿ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಗ್ರೂಪ್ 'ಡಿ' ವೃಂದದ ಹುದ್ದೆಗೆ ಹಾಗೂ ಇದಕ್ಕಿಂತ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದಲ್ಲಿ ಸಫಾಯಿ ಕರ್ಮಚಾರಿ (ಜಾಡಮಾಲಿ) ಹುದ್ದೆಗೆ ಸಾಮಾನ್ಯವಾಗಿ ನೇಮಕಾತಿ ಮಾಡಲಾಗುತ್ತಿದೆ.

ಅದರ ಅನುಸಾರ ಅರ್ಜಿದಾರರ ಶೈಕ್ಷಣಿಕ ಅರ್ಹತೆಯು ದ್ವಿತೀಯ ಪಿ.ಯು.ಸಿ. ಪ್ರಮಾಣ ಪತ್ರವನ್ನು ದೃಢೀಕರಿಸಲು ನಿರ್ದೇಶಕರು, ಪದವಿ ಮೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅಂಕಪಟ್ಟಿಗಳನ್ನು ಕಳುಹಿಸಲಾಗಿತ್ತು. ಅದಕ್ಕೆ ಸಹಾಯಕ ನಿರ್ದೇಶಕರು(ಪರೀಕ್ಷೆ) ಪದವಿ ಮೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ತಮ್ಮ ಪತ್ರ ಪ.ಪೂ.ಶಿ./ದ್ವಿಪ್ರಶಾ/ಅಪಪ/2022-23/ ದಿನಾಂಕ 26.09.2022 ರ ಮೂಲಕ, ದ್ವಿತೀಯ ಪಿ.ಯು.ಸಿ. ಪ್ರಮಾಣಪತ್ರ ಈ ಇಲಾಖೆಯ ದಾಖಲೆಗಳೊಡನೆ ಪರಿಶೀಲಿಸಲಾಗಿ ಅದು ನೈಜವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 5 ಈ ಕೆಳಗಿನಂತಿರುತ್ತದೆ.

(5) Application for appointment :

Every dependent of a deceased Government Servant, Seeking appointment under these rules shall make an application within one year from the date of death of the Government Servant, in such from, as may be notified by the Government, from time to time, to the Head of the Department under whom the deceased Government servant was working.

[1][Provided that in the case of a minor he must have attained the age of eighteen years within one year from the date of death of the Government Servant and he must make an application within one year thereafter.]

ಕುಲಸಚಿವರು

ಕುಲಪತಿಗಳು

CamScanner

ಅರ್ಜಿದಾರರ ತಂದೆ ಹಾಗೂ ಈ ವಿಶ್ವವಿದ್ಯಾಲಯದ ನೌಕರರರಾದ ದಿವಂಗತ ಶ್ರೀ ವೀರನಗೌಡ ಧರ್ಮಗೌಡ ಪಾಟೀಲ ಇವರು ದಿನಾಂಕ 14.08.2022 ರಂದು ನಿಧನರಾಗಿರುತ್ತಾರೆಂದು, ಸರ್ಕಾರದ ಜನನ ಮತ್ತು ಮರಣಗಳ ಮುಖ್ಯ ರಜಿಸ್ಟ್ರಾರ್ ಇವರಿಂದ ಪಡೆದ ಮರಣ ಪ್ರಮಾಣ ಪತ್ರದ ನೋಂದಣಿ ಸಂಖ್ಯೆ. 803083/ಟಿ/ಡಿ/2022/005756 ದಿನಾಂಕ 19.08.2022 ರಂದು ಪಡೆದು ಸಲ್ಲಿಸಿದ ಮರಣ ಪ್ರಮಾಣಪತ್ರದಲ್ಲಿ ಉಲ್ಲೇಖ ಇರುತ್ತದೆ. ಈ ಉಪ ನಿಯಮದ ಪ್ರಕಾರ ನೇಮಕಾತಿಗೆ ನೌಕರರು ಮೃತರಾದ ನಿಗದಿತ ಒಂದು ವರ್ಷದ ಅವಧಿಯಲ್ಲಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲ್ಕಾಣಿಸಿದ ನಿಯಮದ ಉಪನಿಯಮ 6 ರ ಆಯ್ದ ಭಾಗ ಈ ಕೆಳಗಿನಂತಿರುತ್ತದೆ.

(6) Appointment by the Competent Authority :

(1) On receipt of the application under rule 5, the Head of the Department, if satisfied that the applicant fulfills all the conditions specified under these rules, shall appoint, where he is the appointing authority and if not direct the appropriate appointing authority to issue the order of appointment.

(2) The appointment undere sub-rule (1) shall be made as far as possible within a period of three months from the date of receipt of the application under rule 5.

ಶ್ರೀ ನಿತೀಶ ವೀರನಗೌಡ ಪಾಟೀಲ ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣಗೊಂಡಿರುವುದರಿಂದ ಮೇಲ್ಕಾಣಿಸಿದ ಕವಿವಿ ಅನುಶಾಸನವನ್ನು ಮತ್ತು ಸಂಬಂಧಿಸಿದ ಸರ್ಕಾರದ ನಿಯಮಾವಳಿಗಳನ್ವಯ ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕ ಮಾಡುವ ಕುರಿತು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

<u>ನಿರ್ಣಯ</u>

ಶ್ರೀ ನಿತೀಶ ವೀರನಗೌಡ ಪಾಟೀಲ ಇವರನ್ನು ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಅನುಮೋದಿಸಿತು. ಮುಂದುವರೆದು, ನೇಮಕಾತಿ ಹೊಂದಿದ ಎರಡು ವರ್ಷದೊಳಗಾಗಿ ಕಂಪ್ಯೂಟರ ಜ್ಞಾನವನ್ನು ಹೊಂದಿ ಅದರ ಬಗ್ಗೆ ದಾಖಲಾತಿ/ ಪ್ರಮಾಣ ಪತ್ರ/ ಅಂಕಪಟ್ಟಿಯನ್ನು ಸಲ್ಲಿಸುವುದು ಹಾಗೂ ಮುಂದಿನ ಹುದ್ದೆಗೆ ಬಡ್ತಿ ಹೊಂದಲು ಸೇವೆಗೆ ಸೇರಿದ ಒಂದು ವರ್ಷದ ಒಳಗಾಗಿ ಇಲಾಖಾ ಪರೀಕ್ಷೆ ಉತ್ತೀರ್ಣರಾಗುವ ಷರತ್ತನ್ನು ನಿಗದಿಪಡಿಸಿದೆ.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-08: ವಿಷಯ-: ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣಪತ್ರಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯ ನಡವಳಿಯನ್ನು ಅನಾಕ ಮಂಡಳಿಯ ಸಭೆಯ ದೃಢೀಕರಣಕ್ಕಾಗಿ ಕುರಿತು.

ಟಿಪ್ಪಣಿ:

ಪರೀಕ್ಷಾ ವಿಭಾಗಕ್ಕೆ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳ ವಿದ್ಯಾರ್ಥಿಗಳಿಗೆ ವಿತರಿಸಲು ಈ ಕೆಳಗೆ ನಮೂದಿಸಿದಂತೆ ಅಂಕಪಟ್ಟಿಗಳನ್ನು ರಾಜ್ಯ ಸರ್ಕಾರದ ಆದೇಶ ಪತ್ರ ಸಂಖ್ಯೆ:ಇಡಿ/323/ಯುಎನ್ಇ/2020 ದಿನಾಂಕ:04/02/2021 ರ ಹಾಗೂ ರಾಜ್ಯ ಸರ್ಕಾರದ ಅರ್ಥಿಕ ಇಲಾಖೆ ಪತ್ರ ಸಂಖ್ಯೆ ಆಇ/278 ವೆಚ್ಚ-12/2021, ದಿನಾಂಕ: 01/07/2019 ರಲ್ಲಿಯ ಆದೇಶದನ್ವಯ ಎಂ.ಎಸ್.ಆಯ್.ಎಲ್ ಬೆಂಗಳೂರು ಇವರಿಂದ ಖರೀದಿಸಬಹುದಾಗಿದೆ. ಸದರಿ 150 ಜಿ.ಎಸ.ಎಮ್ ಗುಣಮಟ್ಟದ ಅಂಕಪಟ್ಟಿಗಳನ್ನು ಖರೀದಿಸಲು ಅಂದಾಜು ಮೊತ್ತವನ್ನು ಸಹ ಈ ಕೆಳಗಿನಂತೆ ನಮೂದಿಸಲಾಗಿದೆ.

Sl.No	Particulars of Marks Cards And Degree Certificate	Present Stock	Requirement To be Purchased For March 2022, August 2022 & March 2023 Examinations	Total Amount as Per Msil Approved Rate
1	A Series Marks Card	Nil	1,30,000	Rs.35.175 x 1,30,000=43,12,750/-
2	F Series marks Card	Nil	20,000	Rs.35.175x 20,000=6,63,500/-
3	Passing Certificate	Nil	30,000	Rs.17.58x30,000=5,27,400/-
4	PG.CBCS Marks Card	Nil	50,000	Rs.35.175x 50,000=16,58,750/-
5	UG CBCS Marks Card	Nil	1,50,000	Rs.35.175x 1,50,000=49,76,250/-
6	Degree Certificate	Nil	30,000	Rs.35.175x 30,000=9,95,250/-
			Rs.1,31,33,900 +GST+Transport Charges	

ಸದರ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ರಾಜ್ಯ ಸರ್ಕಾರದ ಆದೇಶ ಪತ್ರ ಸಂಖ್ಯೆ:ಇಡಿ/323/ಯುಎನ್ಇ/2020 ದಿನಾಂಕ:04/02/2021 ರಲ್ಲಿ ಎಂ.ಎಸ್.ಆಯ್.ಎಲ್. ಬೆಂಗಳೂರ ಇವರಿಂದ ನೇರವಾಗಿ ಖರೀದಿಸಲು ನಿರ್ದೇಶನ ನೀಡಿರುತ್ತಾರೆ. ಸದರಿ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ಅಂದಾಜು ರೂ. 1,31,33,900=00 + GST Charges and Transport Charges ಗಳು ತಗಲಬಹುದು.

ನಿಯಮಗಳ ಪ್ರಕಾರ ರೂಪಾಯಿ ಒಂದು ಲಕ್ಷ ರೂಗಳಿಗಿಂತ ಹೆಚ್ಚಿಗೆ ಮೊತ್ತದ ಸಾಮಗ್ರಿಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯ ಒಪ್ಪಿಗೆಯನ್ನು ಪಡೆಯುವುದು ಅವಶ್ಯವಾಗಿರುತ್ತದೆ.

ಆದ್ದರಿಂದ, ಆಗಸ್ಟ್/ಸೆಪ್ಟೆಂಬರ್ 2021ರಲ್ಲಿ ಜರುಗಿರುವ ಪರೀಕ್ಷೆಗಳಲ್ಲಿ ಕುಳಿತಿರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಅವಶ್ಯವಾಗಿ ಬೇಕಾಗಿರುವದರಿಂದ, ಸದರಿ ವಿಷಯವನ್ನು ದೊಡ್ಡ ಖರೀದಿ ಸಮಿತಿ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು ಸದರ ಸಭೆಯು ಈ ಕೆಳಗಿನಂತೆ ಶರಾಯಿಸಿದೆ

"ಆಯವ್ಯಯ ಅಂದಾಜು 2022-23ರಲ್ಲಿ ಲೆಕ್ಕ ಶೀರ್ಷಿಕೆ 20026 ಆಗಸ್ಟ ಮತ್ತು ಸೆಪ್ಟೆಂಬರ್ 2022 ರಲ್ಲಿ ಜರುಗಿರುವ ಸ್ನಾತಕ /ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂದಪಟ್ಟ ಅಂಕಪಟ್ಟಿಗಳನ್ನು ಹಾಗೂ ಪದವಿ ಪ್ರಮಾಣಪತ್ರಗಳನ್ನು ಈಗಿರುವ ಭದ್ರತಾ ವೈಶಿಷ್ಟ್ಯಗಳೊಂದಿಗೆ ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಖರೀದಿಸಲು ದೊಡ್ಡ ಖರೀದಿ ಸಮಿತಿ ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗೆಕಾಣಿಸಿದಂತೆ ಒಪ್ಪಿಗೆ ಸೂಚಿಸಿತು"

9/12/22
ಕುಲಸಚಿವರು I/C

ಕುಲಪತಿಗಳು

CamScanner

Sl.No	Particulars of Marks Cards And Degree Certificate	Requirement To be Purchased For March 2022, August 2022 & March 2023 Examinations	Total Amount as Per Msil Approved Rate
1	A Series Marks Card	1,30,000	Rs.35.175 x 1,30,000=43,12,750/-
2	F Series marks Card	20,000	Rs.35.175x 20,000=6,63,500/-
3	Passing Certificate	30,000	Rs.17.58x30,000=5,27,400/-
4	PG.CBCS Marks Card	50,000	Rs.35.175x 50,000=16,58,750/-
5	UG CBCS Marks Card	1,50,000	Rs.35.175x 1,50,000=49,76,250/-
6	Degree Certificate	30,000	Rs.35.175x 30,000=9,95,250/-
		Rs.1,31,33,900 +GST+Transport Charges	

ಆದ್ದರಿಂದ, ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಹಾಗೂ ದೊಡ್ಡ ಖರೀದಿ ಸಮಿತಿ ಸಭೆಯ ನಡುವಳಿಯನ್ನು ಆಡಳಿತ ಮಂಡಳಿಯ ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.

<u>ನಿರ್ಣಯ</u>

ಪರೀಕ್ಷಾ ವಿಭಾಗಕ್ಕೆ ಬೇಕಾದಂತಹ ವಿವಿಧ ನಮೊನೆಯ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣಪತ್ರಗಳನ್ನು ಎಂ.ಎಸ್.ಆಯ್.ಎಲ್. ಬೆಂಗಳೂರು ಇವರಿಂದ ದೊಡ್ಡ ಖರೀದಿ ಸಮಿತಿ ಸಭೆಯ ಒಪ್ಪಿಗೆಯಂತೆ ಖರೀದಿಸಲು ಕುಲಪತಿಗಳು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಸಭೆಯು ಪರಿಶೀಲಿಸಿ ದೃಢೀಕರಿಸಲಾಯಿತು.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-09: ವಿಷಯ-: ದಿನಾಂಕ: 21-11-2022 ರಂದು ನಡೆದ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಪರಿಶೀಲಿಸುವುದು.

ಟಿಪ್ಪಣಿ :

ದಿನಾಂಕ 21-11-2022 ರಂದು ಸಾಯಂಕಾಲ 4.30 ಘಂಟೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸಭಾ ಭವನದಲ್ಲಿ ಸ್ಥಿರಾಸ್ತಿ ಸಮಿತಿ ಸಭೆಯನ್ನು ಕರೆಯಲಾಗಿತ್ತು.

ಸದರಿ ಸಮಿತಿಯವರು ಪರಿಶೀಲಿಸಿ ಮಾಡಲಾದ ಶಿಫಾರಸ್ಸುಗಳನ್ನು ಸಿಂಡಿಕೇಟ ಸಭೆಗೆ ಒಪ್ಪಿಗೆಗಾಗಿ ಮಂಡಿಸಲಾಯಿತು.

ನಿರ್ಣಯ

ದಿನಾಂಕ: 21-11-2022 ರಂದು ನಡೆದ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಪರಿಶೀಲಿಸಿ ಸಿಂಡಿಕೇಟ ಒಪ್ಪಿಗೆಯನ್ನು ಸೂಚಿಸಿತು.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-10: ವಿಷಯ-: ದಿನಾಂಕ 07.11.2022 ರಂದು ಮಧ್ಯಾಹ್ನ 03.30 ಘಂಟೆಗೆ ಜರುಗಿದ ಕ್ರೀಡಾ ಮಂಡಳಿ ಸಭೆಯ ನಡವಳಿಗಳನ್ನು ಪರಿಶೀಲನೆಗಾಗಿ ಸಲ್ಲಿಸಲಾಗಿದೆ.

ಟಿಪ್ಪಣಿ:

ದಿನಾಂಕ 07.11.2022 ರಂದು ಮಧ್ಯಾಹ್ನ 03.30 ಘಂಟೆಗೆ ಸಿಂಡಿಕೇಟ ಹಾಲನಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕ್ರೀಡಾ ಮಂಡಳಿ ಸಭೆ ಜರುಗಿತು. ಸದರ ಸಭೆಯ ನಡವಳಿಗಳನ್ನು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಸಲ್ಲಿಸಲಾಯಿತು.

ನಿರ್ಣಯ

ದಿನಾಂಕ 07.11.2022 ರಂದು ಜರುಗಿದ ಕ್ರೀಡಾ ಮಂಡಳಿ ಸಭೆಯ ನಡವಳಿಗಳನ್ನು ಸಿಂಡಿಕೇಟ ಪರಿಶೀಲಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

CamScanner

ಕಲಂ ಸಂಖ್ಯೆ-11: ವಿಷಯ-: ಶ್ರೀಮತಿ ಎ.ಬಿ.ನಾಯಕ, ಪ್ರಾಚಾರ್ಯರು, ಕವಿವಿ ಪಬ್ಲಿಕ್ ಶಾಲೆ, ಧಾರವಾಡ ಇವರಿಗೆ ಪ್ರಭಾರ ಭತ್ಯೆ ಮಂಜೂರು ಮಾಡುವ ವಿಷಯವಾಗಿ ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸುವ ಕುರಿತು.

ಪ್ರಸ್ತಾವನೆ:

ಶ್ರೀಮತಿ ಎ.ಬಿ.ನಾಯಕ, ಪ್ರಾಚಾರ್ಯರು, ಕವಿವಿ ಪಬ್ಲಿಕ್ ಶಾಲೆ, ಧಾರವಾಡ ಇವರಿಗೆ ದಿನಾಂಕ 16.09.2022 ರ ಕಚೇರಿ ಆದೇಶದನ್ವಯ ಡಾ.ವಿ.ಡಿ.ಬೋಳಿಶೆಟ್ಟಿ ಇವರ ನಿವೃತ್ತಿಯಿಂದ ತೆರವಾದ ಕವಿವಿ ಮಾಧ್ಯಮಿಕ ಶಾಲೆಯ ಪ್ರಾಚಾರ್ಯರ ಹುದ್ದೆಗೆ ಪದೋನ್ನತಿ ನೀಡಿದ್ದು, ಅದರಂತೆ ಅವರು ದಿನಾಂಕ 16.09.2022 ರಂದು ಪ್ರಾಚಾರ್ಯರ ಹುದ್ದೆಗೆ ಹಾಜರಾಗಿರುತ್ತಾರೆ.

ಮುಂದುವರೆದು ದಿನಾಂಕ: 25.01.2022 ರ ಕಚೇರಿ ಆದೇಶದನ್ವಯ ಡಾ.ವಿ.ಡಿ.ಬೋಳಿಶೆಟ್ಟಿ ಇವರು ನಿವೃತ್ತಿ ವಯೋಮಿತಿ ತಲುಪುವುದರಿಂದ ಇವರನ್ನು ದಿನಾಂಕ 31.01.2022 ರಂದು ಕಚೇರಿ ವೇಳೆಯ ನಂತರ ವಿಶ್ವವಿದ್ಯಾಲಯದ ಸೇವೆಯಿಂದ ಕಾರ್ಯವಿಮುಕ್ತಿಗೊಳಿಸಲಾಗಿದ್ದು, ಸದರಿ ಹುದ್ದೆಯ ಕಾರ್ಯಭಾರವನ್ನು ಶ್ರೀಮತಿ ಎ.ಬಿ.ನಾಯಕ ಇವರಿಗೆ ಹೆಚ್ಚುವರಿಯಾಗಿ ವಹಿಸಲಾಗಿರುತ್ತದೆ. ಅದರಂತೆ ಶ್ರೀಮತಿ ಎ.ಬಿ.ನಾಯಕ ಇವರು ದಿನಾಂಕ: 21.09.2022 ರ ತಮ್ಮ ಮನವಿಯ ಮೂಲಕ ತಾವು ಡಾ.ವಿ.ಡಿ.ಬೋಳಿಶೆಟ್ಟಿ ಇವರು ಧಾರಣ ಮಾಡಿದ ಪ್ರಾಚಾರ್ಯರ ಹುದ್ದೆಯ ಕಾರ್ಯಭಾರವನ್ನು ತಾತ್ಕಾಲಿಕವಾಗಿ ವಹಿಸಿಕೊಂಡು ದಿನಾಂಕ: 01.02.2022 ರಿಂದ ದಿನಾಂಕ: 16.09.2022 ರ ಆದೇಶ ಜಾರಿಯಾಗುವ ನಿಕಟಪೂರ್ವ ದಿನಾಂಕ 15.09.2022 ರವರೆಗೆ ತಮ್ಮ ಬೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ ನಿರ್ವಹಿಸಿರುವುದರಿಂದ ದಿನಾಂಕ: 01.02.2022 ರಿಂದ 15.09.2022 ರವರೆಗೆ ನಿಯಮಾನುಸಾರ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುವರು.

ಮುಂದುವರೆದು, ಶ್ರೀಮತಿ ಎ ಬಿ ನಾಯಕ, ಸಹಾಯಕ ಶಿಕ್ಷಕರು ಇವರು ದಿನಾಂಕ : 01.02.2022 ರಿಂದ ದಿನಾಂಕ : 15.09.2022 ರವರೆಗೆ ಕಾರ್ಯನಿರ್ವಹಿಸಿರುತ್ತಾರೆ.

ಕೆಸಿಎಸ್‌ಆರ್ 68 ಹಾಗೂ ಪ್ರಸ್ತುತ ಸರ್ಕಾರಿ ಆದೇಶಗಳ ಪ್ರಕಾರ "ಒಬ್ಬ ಸರ್ಕಾರಿ ನೌಕರನು ತನ್ನ ಕರ್ತವ್ಯದ ಜೊತೆಗೆ ಮತ್ತೊಂದು ಹುದ್ದೆಯ ಕರ್ತವ್ಯಗಳ ಪ್ರಭಾರವನ್ನು ಹೊಂದಿರಲು ನಿಯುಕ್ತನಾದಾಗ, ಮತ್ತು ಅಂಥ ಪ್ರಭಾರವು ಸಾಕಷ್ಟು ಹೆಚ್ಚಿನ ಕೆಲಸವನ್ನು ಹೊಂದಿದ್ದರೆ, ಅವನನ್ನು ಹಾಗೆ ನೇಮಿಸುವ, ಸಕ್ಷಮಾಧಿಕಾರಿಯು, ಆ ಹುದ್ದೆಯ ಕನಿಷ್ಠ ವೇತನದ 7.5% ಕ್ಕೆ ನಿಗದಿ ಮಾಡುವ ಹೆಚ್ಚಿನ ವೇತನಕ್ಕೆ ಹಕ್ಕುಳ್ಳವನಾಗಿರುತ್ತಾನೆ".

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 08 ಎಸ್‌ಆರ್‌ಎಸ್ 2018 ಬೆಂಗಳೂರು, ದಿನಾಂಕ: 30.04.2019

"ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 32 ಮತ್ತು 68 ರಡಿಯಲ್ಲಿ ಸರ್ಕಾರಿ ನೌಕರರನ್ನು ಸ್ವತಂತ್ರ ಪ್ರಭಾರದಲ್ಲಾಗಲೀ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆಗೆ ಬೇರೊಂದು ಹುದ್ದೆಯ ಹೆಚ್ಚಿನ ಪ್ರಭಾರದಲ್ಲಿರಿಸಿದಾಗ ಆ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತದಲ್ಲಿ ಮೊದಲ ಮೂರು ತಿಂಗಳವರೆಗೆ ಶೇಕಡಾ 7.5 ದರದಲ್ಲಿ, ಆ ನಂತರದ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಶೇಕಡಾ 15 ದರದಲ್ಲಿ ಪ್ರಭಾರ ಭತ್ಯೆಯನ್ನು ನಿಗದಿಪಡಿಸಿ ಆದೇಶಿಸಿದೆ."

ಮುಂದುವರೆದು, ಸದರಿಯವರಿಗೆ ಮಂಜೂರು ಮಾಡಲಾಗುವ ಪ್ರಭಾರ ಭತ್ಯೆಯ ಅವಧಿಯು 6 ತಿಂಗಳು ಮೀರುವುದರಿಂದ ಸಿಂಡಿಕೇಟ ಸಭೆಯ ಅನುಮೋದನೆ ಪಡೆಯುವುದು ಅವಶ್ಯವಾಗಿರುತ್ತದೆ.

ಆದ್ದರಿಂದ ಶ್ರೀಮತಿ ಎ.ಬಿ.ನಾಯಕ, ಸಹಾಯಕ ಶಿಕ್ಷಕರು ಇವರು ತಮ್ಮ ಕರ್ತವ್ಯದ ಜೊತೆಗೆ ಹೆಚ್ಚುವರಿಯಾಗಿ ಶಾಲೆಯ ಪ್ರಾಚಾರ್ಯರ ಹುದ್ದೆಯ ಕಾರ್ಯಭಾರವನ್ನು ದಿನಾಂಕ: 01.02.2022 ರಿಂದ 15.09.2022 ರವರೆಗೆ ನಿರ್ವಹಿಸಿದ್ದರಿಂದ ಸದರ ಹುದ್ದೆಯ ವೇತನಶ್ರೇಣಿ ರೂ.43100-83900 ರ ಕನಿಷ್ಠ ವೇತನ ರೂ.43100/- ಕ್ಕೆ ದಿನಾಂಕ: 01.02.2022 ರಿಂದ 30.04.2022 ರವರೆಗೆ ಶೇ.7.5% ರಂತೆ ಹಾಗೂ ದಿನಾಂಕ: 01.05.2022 ರಿಂದ

ಕುಲಸಚಿವರು

ಕುಲಪತಿಗಳು

CamScanner

15.09.2022 ರವರೆಗೆ ಶೇ.15% ರಂತೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಕುರಿತು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಯಿತು.

ನಿರ್ಣಯ

ಶ್ರೀಮತಿ. ಎ.ಬಿ.ನಾಯಕ, ಸಹಾಯಕ ಶಿಕ್ಷಕರು (ಪ್ರಾಚಾರ್ಯರು), ಕವಿವಿ ಪಬ್ಲಿಕ್ ಶಾಲೆ, ಧಾರವಾಡ ಇವರಿಗೆ ಪ್ರಭಾರ ಭತ್ಯೆ ಮಂಜೂರು ಮಾಡುವ ವಿಷಯವಾಗಿ ಆಡಳಿತ ಮಂಡಳಿಯು ಪರಿಶೀಲಿಸಿ ಕೆಸಿಎಸ್ ನಿಯಮಾನುಸಾರ ಕ್ರಮ ಜರುಗಿಸಲು ತರಾಯಿಸಲಾಯಿತು.

ಕುಲಸಚಿವರು

ಕುಲಪತಿಗಳು

ಕಲಂ ಸಂಖ್ಯೆ-12: ವಿಷಯ:- Ratification of the action taken by the Hon'ble Vice-Chancellor for having relieved ***Dr.Sudisha Jogaiah*, Asst., Professor, PG Dept.of Micro-Biology and Bio-Technology, K.U. Dharwad** from his duties to enable him to join to the post of Associate Professor in Central University of Kerala, Kasaragod, Kerala and granted lien for a period of two years on his post of Assistant Professor in PG Dept.of Bio-Technology and Micro-Biology, K.U.Dharwad.

NOTE:

Dr.Sudisha Jogaiah,Asst.,Professor, PG Dept.of Micro-Biology and Bio-Technology, K.U. Dharwad in his letter dated 19.09.2022 has stated that he is selected as Associate Professor in Environmental Science department at Central University of Kerala by direct recruitment through Board of appointment and accordingly he has enclosed a copy of appointment letter **vide No.CUK/APPT/TEACH/2016/VOL.II dt.07.09.2022.** In this regard, **he has requested to relieve him from the present post by sanctioning Lien for two years** as per the UGC Regulations and KCSR rules to take up the new assignment at Central University of Kerala.

It is submitted that the General rules regarding lien on appointment and admissibility of allowances as under:

17 (a) Two or more Government Servants cannot be appointed substantively to the same permanent post at the same time.

(b) A Government servant cannot be appointed substantively except as a temporary measure, to two or more permanent post at the same time.

18 (a) Government servant cannot be appointed substantively to a post on which another Government servant holds a lien.
(b) Unless in any case, it be otherwise provided in the rules, a Government servant on substantively appointment to any permanent post acquires a lien on that post and ceases to hold any lien previously acquired on any other post.
19) Unless his lien is suspended under rule 20, a Government servant holding substantively a permanent post retains a lien on that post –
(a) While performing the duties of that post;
(b) While on Foreign Service, or holding a temporary post or officiating in another post;
(c) During joining time on transfer to another post; unless he is transferred substantively to a post on lower pay, in which case his lien is transferred to the new post from the date on which he is relieved of his duties in the old post;
(d) While on leave;
(e) While under suspension;

Further, **KCS Rule 20 Note-4** states as under:

"When a Government Servant who has secured employment in one Department of Government under the rules of retirement, seeks employment on his own accord in another unit or Department or in another cadre or grade in the same Department, his lien on the original appointment shall be continued to be maintained provided he has already been confirmed in the post till he is permanently absorbed in the Department or Cadre in which he is newly appointed and he shall be given the benefit of the past

ಕುಲಸಚಿವರು I/C

ಕುಲಸಚಿವರು

service for purpose of leave and pension. If however, he is temporary in the first appointment, he will cease to have any connection with his old appointment but he shall be given only the benefit of the past service of leave and pension.

(g) (i) A government servant's lien on a post may in no circumstances be terminated even with his consent if the result will be to leave him without a lien, or a suspended lien upon a permanent post.

(h) Government may transfer to another permanent post in the same cadre the lien of a Government servant who is not performing the duties of the post to which the lien relates, even if that lien has been suspended.

It is submitted that Syndicate has resolved as under in the case of Dr. M. Raghunandan, Assistant Librarian, K.U. Dharwad regarding granting two years lien to him.

Syndicate Res. No. 12 dated 16.04.2007

"Syndicate resolved to reject the request of Dr.M.Raghunandana, Asst. Librarian, K.U. Library, Dharwad to grant lien for a period of 2 years and accept his resignation. Further resolved that no lien shall be given to anybody except when people are proceeding for higher studies/research/on deputation"

Further, Syndicate has resolved as under in the case of **Dr.Venkatagiri Dalavai**, Asst., Professor, Dr.R.C.Hiremath Institute of Kannada Studies,KU Dharwad regarding granting two years lien to him.
